## ಸ್ಮರಣೀಯ ಕೆಲಸ

ಆರ್. ನಾಭಿರಾಜ ಪೂವಣಿ ಅವರ 'ಸಾಹಿತ್ಯದ ವಿಶ್ವರೂಪ ದರ್ಶನ ಸಂಸ್ಕೃತಿ; ಸಂಶೋಧನೆಯ ತಾಣ' (ಜು.29) ಲೇಖನ ಸೊಗಸಾಗಿತ್ತು. ಧರ್ಮಸ್ಥಳದ ಸಂಗ್ರಹಾಲಯಕ್ಕೆ 'ಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನಾ ಪ್ರತಿಷ್ಠಾನ' ಎನ್ನುವ ಹೆಸರು ಸೂಚಿಸಿದ ರಾಷ್ಟ್ರಕವಿ ಕುವೆಂಪು ಅವರೊಂದಿಗೆ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಮಾತುಕತೆ ನಡೆಸುತ್ತಿರುವ ಚಿತ್ರ ಖುಷಿಕೊಟ್ಟಿತು.

—ಪಿ. ಜಯವಂತ ಪೈ, ಕುಂದಾಪುರ

ಹಳೆಯದೆಲ್ಲಾ ಹಾಳು ಎಂಬ ಭಾವನೆಯ ಯುವಜನಾಂಗದ ಕಾಲದಲ್ಲಿ ಭಾರತೀಯ ಸಂಸ್ಕೃತಿ, ಪರಂಪರೆ, ಘನತೆ, ಗೌರವ ಅಗಾಧವಾದದ್ದು ಎಂದು ಸಾರಿ ಹೇಳುವ ಈ ಅಪೂರ್ವ ದಾಖಲೆಗಳನ್ನು ಸಂಗ್ರಹಿಸಿ ಸಾರ್ವಜನಿಕವಾಗಿರಿಸಿರುವ, ಅಪೂರ್ವ ಕಾರ್ಯಗೈದ ವೀರೇಂದ್ರ ಹೆಗ್ಗಡೆ ಅವರಿಗೆ ನಮನಗಳು.

—ಹರಿದಾಸ್ ಬಿ. ಸಿ. ರಾವ್, ಹೆಬ್ರಿ

ಲೇಖನ ತುಂಬಾ ಮಾಹಿತಿಪೂರ್ಣವಾಗಿತ್ತು. ನಾನು ಖುದ್ದು ಅಲ್ಲಿಗೆ ಹೋಗಿ ನೋಡಿದ್ದೇನೆ. ಎಸ್.ಡಿ.ಎಮ್. ಸಾಂಸ್ಕೃತಿಕ ಪ್ರತಿಷ್ಠಾನ ಅದ್ಭುತವಾದ ಕೆಲಸ ಮಾಡಿದೆ. ಭಾಷೆ ಮತ್ತು ಸಂಸ್ಕೃತಿಯ ಸಂಶೋಧನೆಗೆ ಇದೊಂದು ಅತ್ಯುತ್ತಮ ಮಾಹಿತಿಮೂಲ.

—ಉದಯ್ ಕುಮಾರ್, ಇರ್ವತ್ತೂರ

## ನಮ್ಮ ಜೀವಕ್ಕೆ ನಮ್ಮದೇ ಬಾಂಬ್!

ಜು 29ರ ಸಂಚಿಕೆಯಲ್ಲಿ ಉಮಾ ಅನಂತ್ ಅವರು ಬರೆದಿರುವ 'ನಮ್ಮ ಜೀವಕ್ಕೆ ನಮ್ಮದೇ ಬಾಂಬ್!' ಲೇಖನ ಓದಿದೆ. ಯುವಜನರಲ್ಲಿ ಹೆಚ್ಚಾಗಿರುವ ಹೃದಯಾಘಾತದ ಬಗ್ಗೆ ತಿಳಿಸಿದ್ದಾರೆ.

—ಕೆ. ಎಸ್.ಸವಿತ, ಬೆಂಗಳೂರು



ಇಂದಿನ ಜಂಜಡದಲ್ಲಿ ಜನರಲ್ಲಿ ವಯಸ್ಸಿನ ಅಂತರವಿಲ್ಲದೆ ರೋಗಗಳು ಉಲ್ಬಣಿಸುತ್ತಿರುವುದು ವಿಪರ್ಯಾಸ! ಅದರಲ್ಲೂ ಹೃದಯಾಘಾತವನ್ನು ಸ್ವಲ್ಪ ಮಟ್ಟಿಗಾದರೂ ನಿಯಂತ್ರಣ ಮಾಡಬೇಕೆಂದರೆ ಹದಿಹರೆಯದವರಲ್ಲಿ ಜಂಕ್‌ಫುಡ್ ಸೇವನೆಯಿಂದ ಆಗುವ ಅನಾಹುತದ ಬಗ್ಗೆ ಜಾಗೃತಿ ಮೂಡಿಸಬೇಕು.

—ಬೆಂ. ಮು. ಮಾರುತಿ

ತುಂಬ ಒಳನೋಟಗಳುಳ್ಳ ಲೇಖನ. ಈ ಲೇಖನದ ಮೂಲಕ ಲೇಖಕರು ಸಂಸ್ಕೃತಿ ಮತ್ತು ಸಾಹಿತ್ಯ ಪರಂಪರೆಯ ಜ್ಞಾನಭಂಡಾರವೊಂದನ್ನು ತೆರೆದಿಟ್ಟಿದ್ದಾರೆ.

—ದುರ್ಗಾಂಬಿಕಾ ಕೆ.,
ಎಸ್. ನಾಗೇಂದ್ರ, ಮೈಸೂರು

## ವಿಚಾರ ಲಹರಿ

ಜು. 29ರ ಸಂಚಿಕೆಯಲ್ಲಿ 'ವಿಚಾರ ಲಹರಿ' ವಿಭಾಗದಲ್ಲಿ ಅಮೃತಮತಿ, ಅಕ್ಕಯ್ ಪದ್ಮಸಾಲಿ ಬಗ್ಗೆ ಬರೆದ ಬರಹ ನಾವೆಲ್ಲರೂ ಚಿಂತಿಸಬೇಕಾದ ವಿಷಯವೇ. ಲೈಂಗಿಕ ಅಲ್ಪಸಂಖ್ಯಾತರು ತಮ್ಮದಲ್ಲದ ತಪ್ಪಿಗೆ, ಜನಸಾಮಾನ್ಯರ ಜೊತೆಗೆ ಬೆರೆಯಲಾಗದೆ, ತಮ್ಮ ಜೀವನವನ್ನು ಕಟ್ಟಿಕೊಳ್ಳಲು ಹೋರಾಟ ಮಾಡುತ್ತಿದ್ದಾರೆ.

—ಪುಷ್ಪಾ ಶ್ರೀರಾಮ್, ಬೆಂಗಳೂರು

## ತಂದೆಯ ನೆನಪುಗಳು

ಜು. 29ರ ಸಂಚಿಕೆಯಲ್ಲಿ ಜಿ.ವಿ. ಅರುಣ ಅವರು ಬರೆದಿರುವ 'ನಿಮಗೆ ನೆನಪಿದೆಯೇ?' ಪ್ರಬಂಧದಲ್ಲಿ ಗೋವಿಂದರಾವ್ ಅವರ ಲಲಿತಪ್ರಬಂಧದ ಸಾಲುಗಳನ್ನು ಉಲ್ಲೇಖಿಸಿದ್ದಾರೆ. ದಿವಂಗತ ನಾಡಿಗೇರ್ ಗೋವಿಂದರಾವ್ ನನ್ನ ತಂದೆ. ಸುಪ್ರಸಿದ್ಧ ಹಾಸ್ಯ ಬರಹಗಾರ ನಾಡಿಗೇರ ಕೃಷ್ಣರಾಯರ ತಮ್ಮ, ನಮ್ಮ ತಂದೆ ದಾವಣಗೆರೆ ಕಾಲೇಜಿನಲ್ಲಿ ಕನ್ನಡ – ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದರು. ನಂತರ ಮುಂಬೈನ ಫಿಲಂ ಡಿವಿಜನ್‌ನಲ್ಲಿ ಸೀನಿಯರ್ ಕನ್ನಡ ಕಮೆಂಟರಿ ರೈಟರ್ ಆಗಿದ್ದರು. ನಮ್ಮ ತಂದೆಯನ್ನು ನೆನಪಿಸಿಕೊಂಡಿದ್ದಕ್ಕೆ ಧನ್ಯವಾದ.

—ಚಿತ್ರಾ ಪ್ರಸನ್ನಕುಮಾರ್ ನಾಡಿಗೇರ್

## ಬ್ಲ್ಯಾಕ್ ಫಂಗಸ್

ಜು. 22ರ ಸಂಚಿಕೆಯಲ್ಲಿ ಬಸು ಬೇವಿನಗಿಡದ ಬರೆದಿರುವ 'ಬ್ಲ್ಯಾಕ್ ಫಂಗಸ್' ಕಥೆಯು ವಾಸ್ತವತೆಯನ್ನು ಚಿತ್ರಿಸಿದ್ದು, ಅಲ್ಲಲ್ಲಿ ಬಳಸಿರುವ ಉತ್ತರ ಕರ್ನಾಟಕದ ಭಾಷೆ ಓದಲು ಹಿತವೆನಿಸುತ್ತದೆ.

—ಸಮುದ್ರವಳಿ ವಾಸು, ಹಾಸನ

## ರಾಗದ್ವೇಷಗಳಾಚೆ...

ಜು. 29ರ ಸಂಚಿಕೆಯಲ್ಲಿ ಪ್ರಕಟವಾದ 'ರಾಗದ್ವೇಷಗಳಾಚೆ ಜೀವನ ಸೌಂದರ್ಯ' (ಡಾ.ಸಿದ್ರಾಮೇಶ್ ಮುತ್ತಗಿ ಚೇತನಾ ಜೋಶಿ) ಚಿತ್ರಲೇಖನ ಅದ್ಭುತವಾಗಿದೆ. ಪ್ರಾಣಿ ಪಕ್ಷಿಗಳಲ್ಲಿ ಪರಸ್ಪರ ಶತ್ರುತ್ವ, ದ್ವೇಷ ಇರುವುದಿಲ್ಲ.

—ಬಿ. ಶೋಭಾ ಆರಸ, ತೆಕ್ಕಟ್ಟೆ

## ನಾಸಿರುದ್ದೀನ್ ಟಿಪ್ಪಣಿ

ಜು. 29ರ ಸಂಚಿಕೆಯಲ್ಲಿ ವಿಶಾಖ ಎನ್. ಅವರು ಬರೆದಿರುವ 'ದಿಲೀಪ್ ಕೊಡುಗೆ, ನಾಸಿರುದ್ದೀನ್ ಟಿಪ್ಪಣಿ' ಲೇಖನ ಓದಿದೆ. ಮೊದಲ ನೋಟಕ್ಕೆ ಶಾ ಅವರ ಹೇಳಿಕೆ ಬಹಳ ಕಟುವಾಗಿ ಕಂಡರೂ ಅವರ ಮಾತಿನಲ್ಲಿ ಉತ್ಪ್ರೇಕ್ಷೆ ಏನೂ ಇಲ್ಲ. ಸಮಕಾಲೀನರಾದ ರಾಜ್ ಕಪೂರ್ ಮತ್ತು ದೇವಾನಂದ್ ನಿರ್ಮಾಪಕರಾಗಿ, ನಿರ್ದೇಶಕರಾಗಿ ಚಿತ್ರರಂಗಕ್ಕೆ ಇತ್ತ ಕೊಡುಗೆಗಳ (ಉದಾ: ಮಹತ್ತರ ಚಿತ್ರಗಳು, ನವ ನಾಯಕ, ನಾಯಕಿಯರ ಪರಿಚಯ ಮತ್ತು ಪೋಷಣೆ) ಮುಂದೆ ದಿಲೀಪ್ ಕುಮಾರ್ ಅವರ ಕಾಣಿಕೆ ಶೂನ್ಯವೇ.

—ಶ್ರೀನಿವಾಸನ್ ಎಸ್. ಕೆ., ಬೆಂಗಳೂರು



## ನಾಟಿ ಹುಂಜ

ಜು. 29ರ ಸಂಚಿಕೆಯಲ್ಲಿ ಗುರುಪ್ರಸಾದ್ ಕಂಟಲಗೆರೆ ಅವರು ಬರೆದಿರುವ ನಾಟಿ ಹುಂಜ ಸಣ್ಣಕತೆ ಓದಿದೆ. ಬಯಲು ಸೀಮೆಯ ಗಡಸು ಕನ್ನಡದಿಂದ ಹೆಣೆದುದನ್ನು ಮೊದಮೊದಲು ಓದಿದಾಗ ಅರ್ಥೈಸಿಕೊಳ್ಳಲು ತ್ರಾಸವಾಯಿತಾದರೂ ಮತ್ತೆ ಮತ್ತೆ ಓದಿ ಓದಿ ಅರಗಿಸಿಕೊಂಡೆ. ಆ ಕಥೆ, ಆ ಭಾಷೆಯಲ್ಲಿ ಬರೆದರೇನೇ ಚೆನ್ನ ಎಂದು ಕೂಡಾ ಅರಿತೆ. ಸೊಗಸಾದ ನಿರೂಪಣೆಯಿಂದಾಗಿ ಓದಿಸಿಕೊಂಡು ಹೋಯಿತು.

—ಪಿ. ವಾಸುದೇವ್ ಭಟ್, ಬುಡ್ನಾರುಡುಪಿ

ಕಥೆ 'ನಾಟಿ ಹುಂಜ' ಓದುಗರಿಗೆ ತುಂಬಾ ಆನಂದ ನೀಡಿದೆ. ಭಾಷೆಯ ಸೊಗಡು ಎಷ್ಟು ಘಮಗುಟ್ಟಿದೆಯೆಂದರೆ, ನನ್ನ ಸ್ನೇಹಿತರೆಲ್ಲರಿಗೂ ಓದಲು ಹೇಳಿರುವೆ. ಗುರುಪ್ರಸಾದ್ ಕಂಟಲಗೆರೆಯವರಿಗೆ ನನ್ನ ಧನ್ಯವಾದಗಳು. ಆದರೆ, ಕೊನೆ ಅರ್ಥವಾಗಲು ಸಾಮಾನ್ಯರಿಗೆ ತುಸು ಕಷ್ಟವೆನಿಸಿತು.

—ಮೇರಿ ಎಲಿಜಬೆತ್

## ಆಪ್ತ ಲೇಖನ

ಜು. 29ರ ಸಂಚಿಕೆಯಲ್ಲಿ ಸ್ವಯಂಪ್ರಭಾ ಅವರ 'ಜೀವನ್ಮುಖಿ ಅಮೃತಬಳ್ಳಿ' ಲೇಖನ ಉಪಯುಕ್ತವೆನ್ನಿಸಿತು. ಸುಲಭದಲ್ಲಿ ಬೆಳೆಸಬಹುದಾದ ಈ ಬಳ್ಳಿ, ಆರೋಗ್ಯವರ್ಧಕವಾಗಿಯೂ ತುಂಬಾ ಉಪಯುಕ್ತವಾಗಿದೆ. ಇದರೊಂದಿಗೆ ಮಕ್ಕಳ ಜೀವನೋತ್ಸಾಹ ಇಮ್ಮಡಿಸಲು ಹಾಗೂ ಪರಿಸರ ಪ್ರೇಮ ಬೆಳೆಸುವಲ್ಲಿಯೂ ಪರೋಕ್ಷವಾಗಿ ಮಾರ್ಗದರ್ಶನ ನೀಡಿರುವದು ಆಪ್ತವೆನ್ನಿಸುತ್ತದೆ.

—ಜಿ.ಎಸ್. ಸುತಾರ, ಜಮಖಂಡಿ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in